## ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಬೆಂಗಳೂರು.

ಸಂಖ್ಯೆ:ಅ4[1]ಶಾಲಾಬ್ಯಾಗ್:14:2009-10 ದಿನಾಂಕ:06ನೇ ಜುಲೈ 2009

**: ಜ್ಞಾಪನಾ :** Uploaded on 9-7-2009 'D' Mode.

**ವಿಷಯ**: 2009-10ನೇ ಸಾಲಿನ ಪ್ರೋತ್ಸಾಹದಾಯಕ ಕಾರ್ಯಕ್ರಮದಡಿಯಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 01 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಠ ಜಾತಿ/ವರ್ಗದ ಮಕ್ಕಳಿಗೆ ಶಾಲಾ ಬ್ಯಾಗ್ ಮತ್ತು ನೋಟ್ ಪುಸ್ತಕಗಳನ್ನು ವಿತರಿಸಲು ಜಿಲ್ಲಾವಾರು ಆರ್ಥಿಕಗುರಿ ನಿಗದಿಪಡಿಸುವ ಕುರಿತು.

**ಉಲ್ಲೇಖ**: ಸರ್ಕಾರದ ಆದೇಶ ಸಂ:ಇಡಿ:76:ಯೋಯೋಕ:2009, ದಿ:28.04.2009. ಮತ್ತು ದಿ:15.06.2009 [ಇಡಿ:58:ಸ್ವೀಮರ(ಯುನಿಕ್)2009, ದಿ:28.04.2009]
2] ಈ ಕಛೇರಿ ಜ್ಞಾಪನ ಪತ್ರ ಸಮ ಸಂಖ್ಯೆ ದಿನಾಂಕ:13.05.2009.

* * * * *

ಉಲ್ಲೇಖ [2]ರ ಈ ಕಛೇರಿ ಜ್ಞಾಪನ ಪತ್ರದ ಕಡೆ ಗಮನಸೆಳೆಯುತ್ತಾ, 2009-10ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಠ ಜಾತಿ / ವರ್ಗದ ಮಕ್ಕಳಿಗೆ ಶಾಲಾಬ್ಯಾಗ್ ಮತ್ತು ನೋಟ್ ಪುಸ್ತಕಗಳನ್ನು ವಿತರಣೆ ಸಂಬಂಧ ವಿವರವಾದ ಸೂಚನೆ ಹಾಗೂ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮತ್ತು ತಾಲ್ಲೂಕುವಾರು ಫಲಾನುಭವಿಗಳ ಸಂಖ್ಯೆ ಮತ್ತು ತಗಲುವ ಅಂದಾಜುವೆಚ್ಚಕ್ಕೆ ಸಂಬಂಧಿಸಿದಂತೆ ಈಗಾಗಲೇ ಉಲ್ಲೇಖ [2]ರ ಪತ್ರದಲ್ಲಿ ತಿಳಿಸಲಾಗಿದೆ. ಅದರಂತೆ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ. ಬದಲಾಗಿ ಎಸ್.ಡಿ.ಎಂ.ಸಿ ಖಾತೆಗಳಲ್ಲಿ ಉಳಿತಾಯವಿರುವ ಹಣದಿಂದ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಖರ್ಚಿನ ವಿವರಗಳನ್ನು ಒದಗಿಸಿದ ನಂತರ ಬಿಡುಗಡೆ ಮಾಡಲಾಗುವುದೆಂದೂ ಸಹ ತಿಳಿಸಲಾಗಿದೆ. ಕಾರ್ಯಕ್ರಮ ಅನುಷ್ಠಾನ ಪೂರ್ಣಗೊಳಿಸಲು ಕಾಲಮಿತಿಯನ್ನು ಸಹ ನಿಗದಿಗೊಳಿಸಲಾಗಿದೆ. ಉಲ್ಲೇಖ [2]ರ ಜ್ಞಾಪನದಲ್ಲಿ ವಿವರಿಸಿರುವ ಎಲ್ಲಾ ಸೂಚನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಈ ಕೆಳಕಂಡಂತೆ ಪ್ರತಿಯೊಂದು ಜಿಲ್ಲೆಗೂ ಆಯಾ ಜಿಲ್ಲೆಗಳ ಫಲಾನುಭವಿಗಳ ಆಧಾರದ ಮೇಲೆ ವಾರ್ಷಿಕ ಆರ್ಥಿಕ ಗುರಿಯನ್ನು ಕಾಲಂ:03ರಂತೆ ನಿಗದಿಪಡಿಸಿದೆ. ಹಾಗೂ ಕಾಲಂ:04ರಲ್ಲಿ ವಾರ್ಷಿಕ ಗುರಿಯ ಶೇಕಡಾ 25% ಭಾಗಶಃ ಹಣವನ್ನು ಈಗ ಖರ್ಚು ಭರಿಸಲು ಅನುಕೂಲವಾಗುವಂತೆ ಆಯಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಬಿಡುಗಡೆ ಮಾಡಿದೆ. ತಮ್ಮ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಶಾಲಾಬ್ಯಾಗ್ ಮತ್ತು ನೋಟ್‌ಪುಸ್ತಕದ ಖರ್ಚಿನ ಪ್ರಕಾರ ಬಿಲ್ಲುಗಳಿಗೆ ಮೇಲುಸಹಿ ಮಾಡುವುದು. ಮತ್ತು ಆ ಪ್ರಕಾರ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡುವುದು. ಹೀಗೆ ಬಿಡುಗಡೆ ಮಾಡಿದ ಹಣವನ್ನು ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಡ್ರಾ ಮಾಡಿ, ಸಂಬಂಧಿಸಿದ ಎಸ್.ಡಿ.ಎಂ.ಸಿ ಖಾತೆಗಳಿಗೆ ಜಮಾ ಮಾಡುವಂತೆ ಶಾಲಾ ಮುಖ್ಯ ಶಿಕ್ಷಕರಿಗೆ ಕ್ರಾಸ್ ಚೆಕ್ ಮೂಲಕವೇ ಹಣ ಪಾವತಿ ಮಾಡಬೇಕೆಂದು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಪ್ಪದೇ ಸೂಚನೆಗಳನ್ನು ನೀಡುವುದು. ಈಗ ಕಾಲಂ:04ರಲ್ಲಿ ಬಿಡುಗಡೆ ಮಾಡಿರುವ ಹಣವು ಮೊದಲನೇ ಕಂತು ಆಗಿರುವುದರಿಂದ ಕೊರತೆ ಬರುವ ಹಣವನ್ನು ಮುಂದಿನ ಕಂತುಗಳಲ್ಲಿ ಬಿಡುಗಡೆ ಮಾಡಲಾಗುವುದು.

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ನಿಗದಿಪಡಿಸಿರುವ ಅನುದಾನ | ಈಗ ಬಿಡುಗಡೆ ಮಾಡಿರುವ ಅನುದಾನ | ಲೆಕ್ಕ ಶೀರ್ಷಿಕೆ |
|---|---|---|---|---|
| 1 | ಬಾಗಲಕೋಟೆ ಜಿಲ್ಲೆ. | 7052034 | 1763008 | 2202-02-800-1-06-423 |
| 2 | ಬೆಂಗಳೂರು ದಕ್ಷಿಣ ಜಿಲ್ಲೆ | 5676585 | 1419146 | ಡಿಟೋ |
| 3 | ಬೆಳಗಾಂ ಜಿಲ್ಲೆ | 5042855 | 1260714 | ಡಿಟೋ |
| 4 | ಬಳ್ಳಾರಿ | 15057566 | 3764391 | ಡಿಟೋ |
| 5 | ಬೀದರ್ | 8622587 | 2155647 | ಡಿಟೋ |
| 6 | ದಾವಣಗೆರೆ ಜಿಲ್ಲೆ | 8524682 | 2131171 | ಡಿಟೋ |
| | **ಒಟ್ಟು** | ***49976308*** | ***12494077*** | ಡಿಟೋ |
| 7 | ಬೆಂಗಳೂರು ಉತ್ತರ ಜಿಲ್ಲೆ | 3457445 | 864361 | 2202-02-800-1-06-422 |
| 8 | ಬೆಂಗಳೂರು ಗ್ರಾಮಾಂತರ | 3687154 | 921788 | ಡಿಟೋ |
| 9 | ಬಿಜಾಪುರ | 8299482 | 2074870 | ಡಿಟೋ |
| 10 | ಚಾಮರಾಜನಗರ ಜಿಲ್ಲೆ | 4241964 | 1060491 | ಡಿಟೋ |
| 11 | ಚಿಕ್ಕಬಳ್ಳಾಪುರ ಜಿಲ್ಲೆ | 6892849 | 1723212 | ಡಿಟೋ |

| | | | | |
|---|---|---|---|---|
| 12 | ಚಿಕ್ಕಮಗಳೂರು ಜಿಲ್ಲೆ | 4338063 | 1084516 | 2202-02-800-1-06-422 |
| 13 | ಚಿಕ್ಕೋಡಿ ಜಿಲ್ಲೆ | 6875500 | 1718875 | ಡಿಟೋ |
| 14 | ಚಿತ್ರದುರ್ಗ ಜಿಲ್ಲೆ. | 9604137 | 2401034 | ಡಿಟೋ |
| 15 | ದಕ್ಷಿಣ ಕನ್ನಡ ಜಿಲ್ಲೆ. | 2583879 | 645970 | ಡಿಟೋ |
| 16 | ದಾರವಾಡ ಜಿಲ್ಲೆ. | 3245416 | 811354 | ಡಿಟೋ |
| 17 | ಗದಗ್ ಜಿಲ್ಲೆ | 3725232 | 931308 | ಡಿಟೋ |
| 18 | ಗುಲ್ಬರ್ಗಾ ಜಿಲ್ಲೆ | 10497654 | 2624414 | ಡಿಟೋ |
| 19 | ಹಾಸನ ಜಿಲ್ಲೆ | 5361404 | 1340351 | ಡಿಟೋ |
| 20 | ಹಾವೇರಿ ಜಿಲ್ಲೆ. | 5263786 | 1315947 | ಡಿಟೋ |
| 21 | ಕೊಡಗು ಜಿಲ್ಲೆ. | 1963069 | 490767 | ಡಿಟೋ |
| 22 | ಕೋಲಾರ ಜಿಲ್ಲೆ. | 7031124 | 1757781 | ಡಿಟೋ |
| 23 | ಕೊಪ್ಪಳ ಜಿಲ್ಲೆ. | 7392581 | 1848145 | ಡಿಟೋ |
| 24 | ಮಧುಗಿರಿ ಜಿಲ್ಲೆ. | 5023364 | 1255841 | ಡಿಟೋ |
| 25 | ಮಂಡ್ಯ ಜಿಲ್ಲೆ. | 3347570 | 836892 | ಡಿಟೋ |
| 26 | ಮೈಸೂರು ಜಿಲ್ಲೆ. | 10697474 | 2674368 | ಡಿಟೋ |
| 27 | ರಾಯಚೂರು ಜಿಲ್ಲೆ. | 12231921 | 3057980 | ಡಿಟೋ |
| 28 | ರಾಮನಗರ ಜಿಲ್ಲೆ. | 2804233 | 701058 | ಡಿಟೋ |
| 29 | ಶಿವಮೊಗ್ಗ ಜಿಲ್ಲೆ. | 4841846 | 1210462 | ಡಿಟೋ |
| 30 | ತುಮಕೂರು ಜಿಲ್ಲೆ. | 4081899 | 1020475 | ಡಿಟೋ |
| 31 | ಉಡುಪಿ ಜಿಲ್ಲೆ. | 1484408 | 371102 | ಡಿಟೋ |
| 32 | ಉತ್ತರ ಕನ್ನಡ ಜಿಲ್ಲೆ. | 2160585 | 540146 | ಡಿಟೋ |
| 33 | ಯಾದಗಿರಿ ಜಿಲ್ಲೆ. | 7878940 | 1969735 | ಡಿಟೋ |
| | **ಒಟ್ಟು** | **149012977** | **37253244** | |
| | **ಜಮ್ಲಾ** | **198989286** | **49747320** | |

ಮೇಲೆ ವಿವರಿಸಿರುವಂತೆ, ಶಾಲಾಬ್ಯಾಗ್ ಮತ್ತು ನೋಟ್ ಪುಸ್ತಕಗಳನ್ನು ಖರೀದಿಸಿ, ಮಕ್ಕಳಿಗೆ ವಿತರಿಸುವ ಬಗ್ಗೆ ಜಿಲ್ಲಾವಾರು ಆರ್ಥಿಕಗುರಿ ನಿಗದಿಪಡಿಸಿ, ಮೇಲ್ಕಂಡ ಆಯವ್ಯಯದ ಮಿತಿಯೊಳಗೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸತಕ್ಕದ್ದು. ತಮ್ಮ ವ್ಯಾಪ್ತಿಯ ತಾಲ್ಲೂಕುವಾರು ವೆಚ್ಚದ ಮಾಹಿತಿಯನ್ನು ಕ್ರೋಢೀಕರಿಸಿ, ಉಪಯೋಗಿತ ಪ್ರಮಾಣ ಪತ್ರವನ್ನು ದಿನಾಂಕ:15.08.2009ರೊಳಗಾಗಿ ಸಲ್ಲಿಸಲು ತಿಳಿಸಿದೆ. ಹಾಗೂ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಹಣ ಉಳಿತಾಯವಾಗುವ ಸಂಭವವಿದ್ದಲ್ಲಿ ಉಳಿಕೆ ಹಣವನ್ನು ಬೇರೆ ಯಾವುದೇ ಕಾರ್ಯಕ್ರಮಕ್ಕೆ ಉಪಯೋಗಿಸತಕ್ಕದ್ದಲ್ಲವೆಂದು ಸ್ಪಷ್ಟವಾಗಿ ಸೂಚಿಸಿದೆ. ಈ ಉಳಿಕೆ ಹಣವನ್ನು ಸರ್ಕಾರಕ್ಕೆ ನಿಗದಿತ ಅವಧಿಯೊಳಗೆ ಜಮಾ ಮಾಡಲು ತಿಳಿಸಿದೆ.

ನಿರ್ದೇಶಕರು [ಪ್ರಾಥಮಿಕ ಶಿಕ್ಷಣ]

**ಇವರಿಗೆ:**

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001, ಗೌರವ ಪೂರ್ವಕ ಮಾಹಿತಿಗಾಗಿ.
02. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಮತ್ತು ಧಾರವಾಡ. ಇವರಿಗೆ ಮಾಹಿತಿಗಾಗಿ.
03. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ.
04. ರಾಜ್ಯದ ಎಲ್ಲಾ ಉಪ ನಿರ್ದೇಶಕರು [ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ ಸೂಕ್ತಕ್ರಮಕ್ಕಾಗಿ.
05. ಉಪ ನಿರ್ದೇಶಕರು [ಯೋಜನೆ], ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಇವರಿಗೆ ಕಳುಹಿಸುತ್ತಾ, ಕಾಲಂ:04ರಲ್ಲಿ ತೋರಿಸಿರುವ ಹಣವನ್ನು ಆಯಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಎಸ್.ಎಂ.ಸಿ ನಲ್ಲಿ ಅಪ್‌ಲೋಡ್ ಮಾಡಲು ಕ್ರಮವಹಿಸುವುದು.
06. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಾಹಿತಿಗಾಗಿ.
07. ಕಛೇರಿ ಪ್ರತಿ.

ಪೂರ್ಣಿಮ. E:\ADPI\CPE-09\32-2009.doc